# ಕೋಮು ಮತ್ತು ನಿಖರ ಹಿಂಸಾಚಾರ ನಿಯಂತ್ರಣ (ನ್ಯಾಯ ಮತ್ತು ತಡೆ) ವಿಧೇಯಕಕ್ಕೆ ವಿರೋಧವೇಕೆ

**ಅರುಣ್ ಜೇಟ್ಲಿ**
**ರಾಜ್ಯ ಸಭಾ ವಿರೋಧ ಪಕ್ಷದ ನಾಯಕ**

ಎರಡು ವರ್ಷಗಳ ಹಿಂದೆ, ಕೋಮು ಮತ್ತು ನಿಖರ ಹಿಂಸಾಚಾರ ನಿಯಂತ್ರಣ (ನ್ಯಾಯ ಮತ್ತು ತಡೆ) ವಿಧೇಯಕದ ಕರಡನ್ನು ಶ್ರೀಮತಿ ಸೋನಿಯ ಗಾಂಧಿಯವರ ನೇತೃತ್ವದ ರಾಷ್ಟ್ರೀಯ ಸಲಹಾ ಪರಿಷತ್ತು ಮಂಡಿಸಿತ್ತು. ಸಮಾಲೋಚನೆಗಾಗಿ ಈ ವಿಧೇಯಕವನ್ನು ಜಾಲ ತಾಣದಲ್ಲಿ ಪ್ರಕಟಿಸಿತ್ತು. ಕಾನೂನು ಸುವ್ಯವಸ್ಥೆ ಹಾಗೂ ಸಾರ್ವಜನಿಕ ಸುವ್ಯವಸ್ಥೆ ರಾಜ್ಯ ವಿಚಾರಗಳಾಗಿದ್ದು ಸಂಸತ್ ಈ ಮಸೂದೆಯನ್ನು ಅಂಗೀಕರಿಸಿದರೆ ರಾಜ್ಯಗಳ ವಿಚಾರಗಳಲ್ಲಿ ಹಸ್ತಕ್ಷೇಪ ಮಾಡಿದಂತಾಗುತ್ತದೆ ಎಂಬ ಕಾರಣಕ್ಕೆ ನಾನು ಇದನ್ನು ಬಲವಾಗಿ ವಿರೋಧಿಸಿ ಲೇಖನ ಬರೆದಿದ್ದೆ. ಜನ್ಮ ಗುರುತು ಆಧಾರದ ಮೇಲೆ ಅಲ್ಪಸಂಖ್ಯಾತರು ಮತ್ತು ಬಹುಸಂಖ್ಯಾತರ ನಡುವೆ ಪಕ್ಷಪಾತ ಮಾಡುವ ತಾರತಮ್ಯಪೂರಿತ ವಿಧೇಯಕ ಇದಾಗಿದೆ. ಧರ್ಮದ ಆಧಾರದ ಮೇಲೆ ಒಂದು ಸಮುದಾಯದ ವಿರುದ್ಧ ಮತ್ತೊಂದು ಸಮುದಾಯಕ್ಕೆ ದೂರು ನಿವಾರಣೆ ಮತ್ತು ಹೊಣೆಗಾರಿಕೆ ವ್ಯವಸ್ಥೆ ವಿಚಾರದಲ್ಲಿ ಮೇಲುಗೈ ಸಾಧಿಸಲು ಅನುವು ಮಾಡಬಲ್ಲ ಮತ್ತು ಸ್ಥಾಪಿಸಲು ಉದ್ದೇಶಿಸಿರುವ ಪ್ರಾಧಿಕಾರಕ್ಕೆ ಎಲ್ಲೆಯಿಲ್ಲದ ಅಧಿಕಾರ ನೀಡುವ ಉದ್ದೇಶವನ್ನು ವಿಧೇಯಕ ಹೊಂದಿದೆ. ಸಂವಿಧಾನದ ಒಕ್ಕೂಟ ವ್ಯವಸ್ಥೆಗೆ ಮಸೂದೆ ಧಕ್ಕೆವುಂಟು ಮಾಡುವ ಕಾರಣ 2011ರಲ್ಲಿ ನಡೆದ ರಾಷ್ಟ್ರೀಯ ಏಕೀಕರಣ ಪರಿಷತ್ ಸಭೆಯಲ್ಲಿ, ಪಕ್ಷಾತೀತವಾಗಿ ಮುಖ್ಯಮಂತ್ರಿಗಳು ವಿಧೇಯಕಕ್ಕೆ ತಮ್ಮ ವಿರೋಧ ವ್ಯಕ್ತಪಡಿಸಿದ್ದರು. ಲೋಕಸಭೆ ಚುನಾವಣೆಯ ಹಿನ್ನಲೆಯಲ್ಲಿ, ದೇಶವನ್ನು ಕೋಮಿನ ಆಧಾರದ ಮೇಲೆ ವಿಭಜಿಸುವ ಉದ್ದೇಶದಿಂದ ಕೇಂದ್ರ ಗೃಹ ವ್ಯವಹಾರಗಳ ಸಚಿವಾಲಯ ಮಸೂದೆಯ ಪರಿಷ್ಕೃತ ಕರಡನ್ನು ಒಳಗೊಂಡ ಪತ್ರವನ್ನು ರಾಜ್ಯ ಸರ್ಕಾರಗಳಿಗೆ ಬರೆದಿದೆ. ಈ ಕುರಿತು ಸಂಬಂಧಪಟ್ಟವರೊಂದಿಗೆ ಸಮರ್ಪಕ ಸಮಾಲೋಚನೆ ನಡೆದಿಲ್ಲ.

ನಿನ್ನೆ ಡಿಸೆಂಬರ್ 2, 2013ರಂದು ತಮಿಳುನಾಡಿನ ಮುಖ್ಯ ಮಂತ್ರಿ ಡಾ.ಜೆ.ಜಯಲಲಿತಾ ಅವರು ಕರಡು ಪ್ರತಿಯನ್ನು ವಿರೋಧಿಸಿ ಪ್ರಧಾನ ಮಂತ್ರಿಗಳಿಗೆ ವಿವರವಾದ ಪತ್ರ ಬರೆದಿದ್ದಾರೆ. ಚಳಿಗಾಲದ ಸಂಸತ್ ಅಧಿವೇಶನ ಆರಂಭವಾಗುವ ಹಿನ್ನಲೆಯಲ್ಲಿ ಸರ್ಕಾರ ಕರೆದ ಸರ್ವಪಕ್ಷ ಸಭೆಯಲ್ಲಿ ಎಐಎಡಿಎಂಕೆ ಪ್ರಮುಖರು ಈ ವಿಚಾರವನ್ನು ತಿಳಿಸಿದ್ದರು. ತಮಿಳು ನಾಡು ಮುಖ್ಯಮಂತ್ರಿಗಳು ಮಸೂದೆಗೆ ತಮ್ಮ ವಿರೋಧವನ್ನು ಪುನರುಚ್ಚರಿಸಿದ್ದಾರೆ. ಕಾನೂನು ಸುವ್ಯವಸ್ಥೆ ಹಾಗೂ ಸಾರ್ವಜನಿಕ ಸುವ್ಯವಸ್ಥೆ ರಾಜ್ಯ ವಿಚಾರಗಳಾಗಿದ್ದು ಸಂಸತ್ ಈ ಮಸೂದೆಯನ್ನು ಅಂಗೀಕರಿಸಿದರೆ ರಾಜ್ಯಗಳ ವಿಚಾರಗಳಲ್ಲಿ ಹಸ್ತಕ್ಷೇಪ ಮಾಡಿದಂತಾಗುತ್ತದೆ ಎಂದು ಅವರು ಪತ್ರದಲ್ಲಿ ತಿಳಿಸಿದ್ದಾರೆ. ವಿಧೇಯಕದ ನಿಬಂಧನೆಗಳು ಅಸ್ಪಷ್ಟವಾಗಿದ್ದು ಇದರ

ದುರ್ಬಳಕೆಗೆ ವ್ಯಾಪಕ ಅವಕಾಶಗಳಿವೆ ಎಂದು ಅವರು ಹೇಳಿದ್ದಾರೆ. ಮಸೂದೆಯಲ್ಲಿ ಈಗ ಮಾಡಲಾದ ಬದಲಾವಣೆಗಳು ಕೇವಲ ಔಪಚಾರಿಕವಾಗಿದ್ದು ಅದಕ್ಕೆ ತಮ್ಮ ಬಲವಾದ ಆಕ್ಷೇಪಣೆಯನ್ನು ಅವರು ವ್ಯಕ್ತಪಡಿಸಿದ್ದಾರೆ. ಹಗೆತನದ ಪರಿಸರ ಎಂಬುದನ್ನು ಭಯಭೀತಗೊಳಿಸುವ, ಹಗೆತನದ ಹಾಗೂ ಆಕ್ರೋಶದಿಂದ ಕೂಡಿದ ಪರಿಸರ ಸೃಷ್ಟಿ ಎಂಬುದಾಗಿ ವ್ಯಾಖ್ಯಾನಿಸಲಾಗಿದೆ ಎಂದು ಅವರು ಪುನರುಚ್ಚರಿಸಿದ್ದಾರೆ. ಆ ಪದಗಳಿಗೆ ವಿಭಿನ್ನ ತಾತ್ಪರ್ಯಗಳನ್ನು ಕಾಣಬಹುದು. ಕೋಮು ಸೂಕ್ಷ್ಮ ಪರಿಸ್ಥಿತಿ ನಿಭಾಯಿಸಲು ಅಸಾಧ್ಯವಾಗಬಲ್ಲ ಇಕ್ಕಟ್ಟಿನ ಪರಿಸ್ಥಿತಿಯನ್ನು ಸಾರ್ವಜನಿಕ ನೌಕರರು ಅನುಭವಿಸುವ ಪರಿಸ್ಥಿತಿಯನ್ನು ಈ ಮಸೂದೆ ಸೃಷ್ಟಿಸುತ್ತದೆ ಎಂದು ಅವರು ಅಭಿಪ್ರಾಯ ಪಟ್ಟಿದ್ದಾರೆ. ಹೊಸ ಕರಡು ವಿಧೇಯಕವು ರಾಜ್ಯ ಸರ್ಕಾರಗಳ ಅಧಿಕಾರವನ್ನು ಮೊಟಕುಗೊಳಿಸುವ ಮತ್ತು ಅದರಲ್ಲಿ ಹಸ್ತಕ್ಷೇಪ ಮಾಡುವ ಮೂಲಕ ಚುನಾಯಿತ ಸರ್ಕಾರಗಳ ಅಸ್ತಿತ್ವವನ್ನು ಕಡೆಗಣಿಸುವ ಅಧಿಕಾರವನ್ನು ಸಂಬಂಧಿತ ಪ್ರಾಧಿಕಾರಗಳಿಗೆ ನೀಡಲು ಹೊರಟಿದೆ. ರಾಜ್ಯ ಸರ್ಕಾರಗಳ ಸಂವೈಧಾನಿಕ ಸ್ಥಾನಮಾನದ ಮೇಲೆ ಅತಿಕ್ರಮ ಪ್ರವೇಶ ಮಾಡುವ ಪರ್ಯಾಯ ಪ್ರಾಧಿಕಾರವನ್ನು ಸೃಷ್ಟಿಸುವ ದುರುದ್ದೇಶದ, ನಿರುತ್ಪಾದಕ ಹಾಗೂ ಏಕಪಕ್ಷೀಯ ದೃಷ್ಟಿಕೋನವನ್ನು ಭಾರತ ಸರ್ಕಾರ ಹೊಂದುವ ಪರಿಪಾಠ ಹೆಚ್ಚಿದೆ ಎಂದು ಅವರು ಅಂತಿಮವಾಗಿ ಅಭಿಪ್ರಾಯ ಪಟ್ಟಿದ್ದಾರೆ.

ಕರಡು ವಿಧೇಯಕ ಬಹಿರಂಗವಾಗದೆಯಿದ್ದರೂ, ಈ ವಿಚಾರವನ್ನು ಸಾರ್ವಜನಿಕ ಚರ್ಚೆಗೆ ತರುವಲ್ಲಿ ಸಕ್ರಿಯ ಪಾತ್ರ ವಹಿಸಿರುವ ತಮಿಳು ನಾಡು ಮುಖ್ಯಮಂತ್ರಿಗಳ ಕ್ರಮ ಸ್ವಾಗತಾರ್ಹವಾಗಿದೆ. ಅವರ ಅಭಿಪ್ರಾಯವು ತಾರ್ಕಿಕವಾದದ್ದು ಮತ್ತು ವೈಚಾರಿಕೆಯಿಂದ ಕೂಡಿದ್ದು ಸಂವಿಧಾನದ ಒಕ್ಕೂಟ ವ್ಯವಸ್ಥೆಗೆ ಅನುಗುಣವಾಗಿದೆ.